ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

---

ವಿಷಯ: ತುಮಕೂರು ಜಿಲ್ಲೆಯ ಶಿರಾ ಮತ್ತು ಕೊರಟಗೆರೆ 66/11ಕೆ.ವಿ ಉಪಕೇಂದ್ರದ ಆವರಣಗಳಲ್ಲಿ ಬೆಸ್ಕಾಂ ನ ಉಪವಿಭಾಗ ಕಚೇರಿ ಕಟ್ಟಡಗಳನ್ನು ನಿರ್ಮಿಸಲು ನಿಗಮದ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ.

ಉಲ್ಲೇಖ:
1. ಕವಿಪ್ರನಿನಿ/ಬಿ9/4948/04-05 ದಿನಾಂಕ 29/04/2005.
2. ಕವಿಪ್ರನಿನಿ/ಬಿ9/4948/04-05 ದಿನಾಂಕ 26/10/2006.
3. ಬೆವಿಕಂ/ಮು.ಪ್ರ.ವ್ಯ(ನಿವ್ಯ)/ಉಪ್ರವ್ಯ(ಸಿ)/ಬಿಸಿ-38/18-19/4091-93 ದಿನಾಂಕ 02/08/2018.
4. ಮು.ಇಂ (ವಿ)/ಪ್ರ./ತು/ಕಾ.ನಿ.ಇಂ (ಕಾ)/2019-20/3999-4002 ದಿನಾಂಕ 05/08/2019.
5. ಮು.ಇಂ(ವಿ)/ಪ್ರವ/ತು/ಕಾ.ನಿ.ಇಂ(ಕಾ/2021-22/1254-55 ದಿನಾಂಕ 20/05/2021.
6. ದಿನಾಂಕ 18/11/2021 ರಂದು ನಡೆದ 126 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆ ನಡವಳಿಗಳು.

**ಪೀಠಿಕೆ:**

1. ತುಮಕೂರು ಜಿಲ್ಲೆ, ಶಿರಾ ಮತ್ತು ಕೊರಟಗೆರೆ 66/11ಕೆ.ವಿ ಉಪಕೇಂದ್ರಗಳ ಆವರಣದಲ್ಲಿ ಬೆಸ್ಕಾಂನ ಉಪವಿಭಾಗ ಕಚೇರಿಗಳು ಕವಿಪ್ರನಿನಿ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಸದರಿ ಕಟ್ಟಡಗಳು ಸುಮಾರು 60 ವರ್ಷಗಳ ಹಿಂದೆ ನಿರ್ಮಾಣಗೊಂಡಿದ್ದು, ಕಟ್ಟಡಗಳ ಮೇಲ್ಚಾವಣಿಯಿಂದ ನೀರು ಸೋರುತ್ತಿದ್ದು, ಶಿಥಿಲಾವಸ್ಥೆಯಲ್ಲಿರುತ್ತದೆ. ಸದರಿ ಕಟ್ಟಡಗಳನ್ನು ಕೆಡವಿ ನೂತನ ಉಪವಿಭಾಗ ಕಚೇರಿ ಕಟ್ಟಡಗಳನ್ನು ನಿರ್ಮಿಸಲು ಸದರಿ ಉಪಕೇಂದ್ರಗಳ ಆವರಣಗಳಲ್ಲಿ ಕವಿಪ್ರನಿನಿ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡಲು ಬೆಸ್ಕಾಂ ನಿಂದ ಕೋರಿಕೆ ಸಲ್ಲಿಕೆಯಾಗಿರುತ್ತದೆ.

2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ತುಮಕೂರು ರವರು ಸದರಿ ಉಪಕೇಂದ್ರಗಳ ಆವರಣದಲ್ಲಿ ಹಾಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ಕೆಡವಿ ಬೆಸ್ಕಾಂಗೆ ನೂತನ ಉಪವಿಭಾಗ ಕಚೇರಿ ಕಟ್ಟಡ ನಿರ್ಮಾಣಕ್ಕೆ ಸ್ಥಳ ನೀಡಬಹುದೆಂದು ಅಭಿಪ್ರಾಯ ನೀಡಿರುತ್ತಾರೆ. ಮುಖ್ಯ ಇಂಜಿನಿಯರ್ (ವಿ), (ಯೋ ಮತ್ತು ಸ) ರವರು ಸಹ ಬೆಸ್ಕಾಂ ಕೋರಿರುವ ಜಾಗಗಳು ಮುಂಬರುವ ದಿನಗಳಲ್ಲಿ ಉಪಕೇಂದ್ರದ ವಿಸ್ತರಣೆಗೆ ಯಾವುದೆ ಅಡ್ಡಿಬರುವುದಿಲ್ಲವೆಂದು ತಿಳಿಸಿರುತ್ತಾರೆ.

3. ಕವಿಪ್ರನಿನಿ ಯ ಒಡೆತನದಲ್ಲಿದ್ದ ಒಟ್ಟಾರೆ ಆಸ್ತಿಯನ್ನು ಪ್ರಸರಣ ಆಸ್ತಿ ಹಾಗೂ ವಿತರಣಾ ಆಸ್ತಿಗಳೆಂದು ವರ್ಗೀಕರಿಸಿದ ನಂತರ, ಎಸ್ಕಾಂ ಗಳಿಗೆ ಅವಶ್ಯವಿರುವ ಕವಿಪ್ರನಿನಿ ಜಾಗವನ್ನು ಹಾಗೂ ಕವಿಪ್ರನಿನಿ ಗೆ ಅವಶ್ಯವಿರುವ ಎಸ್ಕಾಂ ಗಳ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ, ದಿನಾಂಕ 29/04/2005 ರ ಆದೇಶದಲ್ಲಿ Arms-length arrangement ನ್ನು ಅನುಮೋದಿಸಲಾಗಿದೆ. ಸದರಿ ಆದೇಶದನ್ವಯ, ಕವಿಪ್ರನಿನಿ ಯಿಂದ ಎಸ್ಕಾಂಗಳಿಗೆ ಲೀಸ್ ಆಧಾರದ ಮೇಲೆ ನೀಡುವ ಜಾಗಗಳ ವಾರ್ಷಿಕ ಲೀಸ್ ಮೊತ್ತವನ್ನು ಸಾಂಕೇತಿಕವಾಗಿ ಪ್ರಚಲಿತ ಮಾರ್ಗಸೂಚಿ ಬೆಲೆಯ 0.1% ರಂತೆ ನಿಗದಿಪಡಿಸಬಹುದಾಗಿದ್ದು, ಸದರಿ ಲೀಸ್ ಮೊತ್ತವನ್ನು ಪ್ರತಿ 5 ವರ್ಷಗಳಿಗೊಮ್ಮೆ ಅಂದಿನ ಮಾರ್ಗಸೂಚಿ ಬೆಲೆಯನ್ವಯ ಪರಿಷ್ಕರಿಸಬಹುದಾಗಿರುತ್ತದೆ.

SE(ТТ&MIS) 4



4. ಬೆಸ್ಕಾಂ ನಿಂದ ತುಮಕೂರು ಪ್ರಸರಣ ವಲಯ ವ್ಯಾಪ್ತಿಯಲ್ಲಿ ಕವಿಪ್ರನಿನಿ ಕಟ್ಟಡಗಳ ಬಾಡಿಗೆ, ನಿರ್ವಹಣೆ ವೆಚ್ಚ, ನೀರು ಸರಬರಾಜು ವೆಚ್ಚ ಹಾಗೂ ಲೀಸ್ ಮೊತ್ತಗಳ ಬಾಕಿ ಮೊತ್ತವನ್ನು ದಿನಾಂಕ 31/03/2021 ರವರೆಗೆ ಪಾವತಿಸಲಾಗಿದೆಯೆಂದು ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ತುಮಕೂರು ರವರು ತಿಳಿಸಿರುತ್ತಾರೆ.

5. ತುಮಕೂರು ಜಿಲ್ಲೆಯ ಶಿರಾ ಮತ್ತು ಕೊರಟಗೆರೆ 66/11ಕೆ.ವಿ ಉಪಕೇಂದ್ರಗಳ ಅವರಣಗಳಲ್ಲಿ ಹಾಲಿ ಇರುವ ಕಟ್ಟಡಗಳನ್ನು ಕೆಡವಿ, ಬೆಸ್ಕಾಂ ನೂತನ ಕಚೇರಿ ಕಟ್ಟಡಗಳನ್ನು ನಿರ್ಮಿಸಲು ಸದರಿ ಕಟ್ಟಡಗಳನ್ನೊಳಗೊಂಡಂತೆ 30 X 50 ಮೀಟರ್ ಅಳತೆಯ ನಿಗಮದ ಜಾಗಗಳನ್ನು, ಲೀಸ್ ಆಧಾರದ ಮೇಲೆ ನೀಡುವ ಪ್ರಸ್ತಾವನೆಯನ್ನು, ದಿನಾಂಕ 18/11/2021 ರಂದು ನಡೆದ 126 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರ ಸಭೆಯಲ್ಲಿ ಮಂಡಿಸಲಾಗಿದ್ದು, ಸದರಿ ಸಭೆಯ ನಡವಳಿಯನ್ವಯ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ9/85296/18-19/ಬೆಂಗಳೂರು** **ದಿನಾಂಕ 19/02/2022**

ತುಮಕೂರು ಜಿಲ್ಲೆಯ ಶಿರಾ ಮತ್ತು ಕೊರಟಗೆರೆ 66/11ಕೆ.ವಿ ಉಪಕೇಂದ್ರದ ಆವರಣಗಳಲ್ಲಿ ಹಾಲಿ ಶಿಥಿಲಾವಸ್ಥೆಯಲ್ಲಿರುವ ಉಪವಿಭಾಗ ಕಚೇರಿ ಕಟ್ಟಡಗಳನ್ನು ಕೆಡವಿ ಬೆಸ್ಕಾಂನ ನೂತನ ಕಚೇರಿ ಕಟ್ಟಡಗಳನ್ನು ನಿರ್ಮಿಸಲು ಸದರಿ ಕಟ್ಟಡಗಳನ್ನೊಳಗೊಂಡಂತೆ 30 X 50 ಮೀಟರ್ ಅಳತೆಯ ನಿಗಮದ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡಲು ಆದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಶಿರಾ ಮತ್ತು ಕೊರಟಗೆರೆ ಉಪಕೇಂದ್ರಗಳ ಆವರಣದಲ್ಲಿ ಬೆಸ್ಕಾಂ ಗೆ ಈ ಕೆಳಕಂಡ ಷರತ್ತುಗಳನ್ವಯ ಲೀಸ್ ಆಧಾರದ ಮೇಲೆ ಸದರಿ ಜಾಗಗಳನ್ನು ನೀಡಲು ಕೂಡಲೆ ಅಗತ್ಯ ಕ್ರಮಕೈಗೊಳ್ಳುವಂತೆ ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ತುಮಕೂರು ರವರಿಗೆ ನಿರ್ದೇಶನ ನೀಡಲಾಗಿದೆ.

1. ಬೆಸ್ಕಾಂ ಕೋರಿಕೆಯನ್ವಯ ತುಮಕೂರು ಜಿಲ್ಲೆಯ ಶಿರಾ ಮತ್ತು ಕೊರಟಗೆರೆ 66/11ಕೆ.ವಿ ಉಪಕೇಂದ್ರದ ಆವರಣಗಳಲ್ಲಿ ಬೆಸ್ಕಾಂ ನ ಉಪವಿಭಾಗ ಕಚೇರಿ ಕಟ್ಟಡಗಳನ್ನು ನಿರ್ಮಿಸಲು 30 X 50 ಮೀಟರ್ ಅಳತೆಯ ನಿಗಮದ ಜಾಗಗಳನ್ನು 30 ವರ್ಷಗಳ ಲೀಸ್ ಆಧಾರದ ಮೇಲೆ ಹಂಚಿಕೆ ಮಾಡುವುದು.

2. ಸದರಿ ಜಾಗಗಳಲ್ಲಿ ಹಾಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ಬೆಸ್ಕಾಂ ನ ವತಿಯಿಂದಲೇ 'as is where is basis' ನಂತೆ ತೆರವುಗೊಳಿಸಲು ಹಾಗೂ ಸದರಿ ಕಟ್ಟಡಗಳನ್ನು ತೆರವುಗೊಳಿಸುವ ಟೆಂಡರ್ ಪ್ರಕ್ರಿಯೆಯಲ್ಲಿ ಗುತ್ತಿಗೆದಾರರು ಬೆಸ್ಕಾಂ ಗೆ ಪಾವತಿಸುವಂತಹ ಮೊತ್ತ ಇದ್ದಲ್ಲಿ, ಸದರಿ ಮೊತ್ತವನ್ನು ಕವಿಪ್ರನಿನಿ ಲೆಕ್ಕಕ್ಕೆ ಜಮಾ ಮಾಡುವಂತೆ ಬೆಸ್ಕಾಂ ಗೆ ತಿಳಿಸುವುದು.

3. ಸದರಿ ಜಾಗಗಳನ್ನು ಬೆಸ್ಕಾಂ ಗೆ ನೀಡುವ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್‌ಎಸ್ ವಿಭಾಗ, ತುಮಕೂರು ರವರು ಬೆಸ್ಕಾಂನೊಂದಿಗೆ ಲೀಸ್ ಒಪ್ಪಂದ ಮಾಡಿಕೊಳ್ಳುವುದು.

4. ಸದರಿ ಜಾಗಗಳ ಹಾಲಿ ಮಾರ್ಗಸೂಚಿ ಬೆಲೆಯನ್ವಯ ಹಾಗೂ ಕವಿಪ್ರನಿನಿ ಮತ್ತು ಎಸ್ಕಾಂ ಗಳ ನಡುವೆ ಹಾಲಿ ಇರುವ Arms-length arrangement ನ ನಿಯಮಗಳಂತೆ, ವಾರ್ಷಿಕ ಲೀಸ್ ಮೊತ್ತವನ್ನು ಲೆಕ್ಕಾಚಾರ ಮಾಡಿ ಪಾವತಿಸುವಂತೆ, ಬೆಸ್ಕಾಂ ಗೆ ಸೂಚಿಸುವುದು.

5. ಸದರಿ ಲೀಸ್ ಮೊತ್ತವನ್ನು ಪ್ರತಿ 5 ವರ್ಷಗಳಿಗೊಮ್ಮೆ, ಅಂದಿನ ಮಾರ್ಗಸೂಚಿ ಬೆಲೆಯನ್ವಯ ಹಾಗೂ Arms-length arrangement ನ ನಿಯಮಗಳನ್ವಯ, ಪರಿಷ್ಕರಿಸುವುದು. ಹಾಗೂ ವಾರ್ಷಿಕ ಲೀಸ್ ಮೊತ್ತವನ್ನು, ಪ್ರತಿ ವರ್ಷ ಏಪ್ರಿಲ್ ಮಾಹೆಯ ಮೊದಲ ವಾರದಲ್ಲಿ, ಮುಂಗಡವಾಗಿ ತುಮಕೂರು, ಟಿಎಲ್ ಮತ್ತು ಎಸ್‌ಎಸ್ ವಿಭಾಗಕ್ಕೆ, ಪಾವತಿಸುವಂತೆ ಬೆಸ್ಕಾಂ ಗೆ ಸೂಚಿಸುವುದು.

6. ಬೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗಗಳನ್ನು, ಉದ್ದೇಶಿತ ಕಟ್ಟಡಗಳ ನಿರ್ಮಾಣಕ್ಕೆ ಮಾತ್ರ ಉಪಯೋಗಿಸುವಂತೆ ಹಾಗೂ ಬೇರೆ ಯಾವುದೆ ಉದ್ದೇಶಕ್ಕೆ ಬಳಸಬಾರದೆಂಬ, ಷರತ್ತನ್ನು ವಿಧಿಸುವುದು.

7. ಬೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗಗಳ ಕರಾರು ಒಪ್ಪಂದ ಮಾಡಿಕೊಂಡ ದಿನದಿಂದ, ಒಂದು ವರ್ಷದ ಅವಧಿಯೊಳಗೆ, ಉದ್ದೇಶಿತ ಕಟ್ಟಡಗಳ ನಿರ್ಮಾಣಕ್ಕೆ ಕ್ರಮಕೈಗೊಳ್ಳುವಂತೆ ತಿಳಿಸುವುದು, ಇಲ್ಲವಾದ್ದಲ್ಲಿ, ಒಪ್ಪಂದದ ಕರಾರು ರದ್ದಾಗುವುದೆಂಬ ಷರತ್ತನ್ನು ವಿಧಿಸುವುದು.

8. ನಿಗಮ ಲೀಸ್ ನೀಡಲು ಅನುಮೋದಿಸಿರುವ ಜಾಗಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳಲು ಬೆಸ್ಕಾಂ ಗೆ ಸೂಚಿಸುವುದು.

9. ಲೀಸ್ ಆಧಾರದ ಮೇಲೆ ಬೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗಗಳ ಬಗ್ಗೆ, ಟಿಎಲ್ ಮತ್ತು ಎಸ್ಎಸ್ ವಿಭಾಗದ ಆಸ್ತಿ ಪುಸ್ತಕದಲ್ಲಿ, ಅಗತ್ಯ ದಾಖಲಾತಿಗಳನ್ನು ಮಾಡುವುದು.

10. ಬೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗಗಳ ಬಗ್ಗೆ ನಿಗಮದ ದಿನಾಂಕ 24/04/2005 ರ ಆದೇಶ ಹಾಗೂ 26/10/2006 ಸುತ್ತೋಲೆಯಲ್ಲಿ ತಿಳಿಸಿರುವ Arms-length arrangement ನ ನಿಯಮಗಳನ್ವಯ ಮುಂದಿನ ಅಗತ್ಯ ಕ್ರಮಕೈಗೊಳ್ಳುವುದು.

**ಆದೇಶದ ಮೇರೆಗೆ**

**ನಿರ್ದೇಶಕರು (ಆ ಮತ್ತು ಮಾ.ಸಂ)**
**ಕವಿಪ್ರನಿನಿ, ಬೆಂಗಳೂರು.**

**ಪ್ರತಿಗಳು:–**

1. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು.
2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ತುಮಕೂರು.
3. ಮುಖ್ಯ ಇಂಜಿನಿಯರ್ (ವಿ), (ಕಾ ಮತ್ತು ಪಾ) ವಲಯ, ಬೆಸ್ಕಾಂ ಚಿತ್ರದುರ್ಗ.
4. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) /(ಆಂತರಿಕ ಪರಿಶೋಧನೆ), ಕವಿಪ್ರನಿನಿ.
5. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ತುಮಕೂರು.
7. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
8. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
9. ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ ವಲಯ, ಕವಿಪ್ರನಿನಿ, ತುಮಕೂರು.
10. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿಎಲ್ ಮತ್ತು ಎಸ್ಎಸ್ ವಿಭಾಗ, ಕವಿಪ್ರನಿನಿ, ತುಮಕೂರು.
11. ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ, ತುಮಕೂರು.
12. ಉಪಲೆಕ್ಕ ನಿಯಂತ್ರಣಾಧಿಕಾರಿ (ಆಂತರಿಕ ಪರಿಶೋಧನೆ), ಪ್ರಸರಣ ವಲಯ, ಕವಿಪ್ರನಿನಿ, ತುಮಕೂರು.
13. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
14. ಲೆಕ್ಕಾಧಿಕಾರಿ (ಕೋಡೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.